ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 3819/2022

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ -02

**ಸಾಕ್ಷಿಗೆ ದಿಃ 24.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ ಹೆಚ್.ಬಿ.ವಾಯ್. ವಕೀಲರಿಂದಃ**

ನಾನು ಹಕ್ಕಿಮರಿಪಾಳ್ಯದಲ್ಲಿ ವಾಸವಾಗಿರುತ್ತೇನೆ. ನಾನು ಬೆಂಗಳೂರಿನ ಬೊಮ್ಮನಹಳ್ಳಿ ಹೊಂಗಸಂದ್ರ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತೇನೆ. ನಾನು ಬೆಳಿಗ್ಗೆ 9 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 6 ಗಂಟೆಗೆ ಬರುತ್ತೇನೆ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತೇನೆ. ನನ್ನ ಕುಟುಂಬದವರು ಸಹ ಅಲ್ಲೆ ವಾಸ ಮಾಡುತ್ತಿದ್ದಾರೆ. ದಿಃ 02.02.2019 ರಂದು ಗಲಾಟೆ ಆಗಿರುತ್ತದೆ. ಆರೋಪಿತರಿಗೂ ನಮಗೆ ಕೆಳ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ದಾವೆ ನಂ 202/2019 ಆಗಿದ್ದು ಆರೋಪಿ 1 ನನ್ನ ತಂದೆಯ ವಿರುದ್ದ ದಾಖಲಿಸಿರುತ್ತಾರೆ ಎಂದರೆ ಸರಿ.

ಓಎಸ್ 548/2022 ರಂದೆ ನಾವು ಸಹ ಆರೋಪಿತರ ವಿರುದ್ದ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಆರೋಪಿತರಿಗೂ ನಮಗೂ ಆಗುವುದಿಲ್ಲ ಅವರನ್ನು ಕಂಡರೆ ನಮಗೆ ಅಷ್ಟಕ್ಕಷ್ಟೇ ಎಂದರೆ ಸರಿ. ಆರೋಪಿ 4 ಬೆನಚಕಲ್ಲು ಮತ್ತು 5 ಅವರು ಕಿಲಾರ ಗ್ರಾಮದವರು ಆಗಿರುತ್ತಾರೆ. ಆರೋಪಿ 4 ಮತ್ತು 5 ಅವರು ತಮ್ಮ ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿ. ಹಕ್ಕಿಮರಿಪಾಳ್ಯದಿಂದ ಚೌಡನಕೊಪ್ಪೆ 1 ಕೀ ಮೀ ದೂರದಲ್ಲಿದೆ. ಗಲಾಟೆ ಸಂಜೆ 7.30 ಗಂಟೆಯ ಸಮಯದಲ್ಲಿ ಆಗಿರುತ್ತದೆ. ಆ ಸಮಯಕ್ಕೆ ಕತ್ತಲು ಇರುತ್ತದೆ ಎಂದರೆ ಸರಿ.

ಆರೋಪಿ 3 ಮತ್ತು 5 ಅವರ ಕೈಯಲ್ಲಿ ದೊಣ್ಣೆಗಳು ಇದ್ದವು. ದೊಣ್ಣೆಗಳು 5 ಅಡಿ

ಇದ್ದವು. ಸಾಕ್ಷಿ ನಂತರ ಕತ್ತಲು ಇದ್ದ ಕಾರಣ ಕಂಡಿರುವುದಿಲ್ಲವೆಂದು ಹೇಳುತ್ತಾರೆ. ಕತ್ತಲೆ ಇದ್ದ ಕಾರಣ ಏನು ಕಾಣಲಿಲ್ಲವಾ ಎಂದರೆ ಸಾಕ್ಷಿ ದೊಣ್ಣೆ ಮತ್ತು ಕಲ್ಲು ಕೈಯಲ್ಲಿತ್ತು ಎಂದು ಹೇಳುತ್ತಾರೆ. ಕಲ್ಲುಗಳ ಬಗ್ಗೆ ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಗಲಾಟೆ ಸಮಯದಲ್ಲಿ 5-6 ಜನ ಸೇರಿದ್ದರು ಬೇರೆ ಯಾರು ಜನರು ಇರಲಿಲ್ಲ.

ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ನಾನು ನನ್ನ ಅಣ್ಣ ಮತ್ತು ತಂದೆ ತಾಯಿ ಇದ್ದೇವು. ಚಾಸಾ 1 ನನ್ನ ಅಣ್ಣ ಆಗಬೇಕು. ಚಾಸಾ 3 ನನ್ನ ತಂದೆ ಚಾಸಾ 4 ರಿಂದ 7 ಅವರು ನಮ್ಮ ಗ್ರಾಮದವರು ಆಗಿರುತ್ತಾರೆ. ಅವರು ನಿಮಗೆ ಚನ್ನಾಗಿ ಪರಿಚಯ ಎಂದರೆ ಸಾಕ್ಷಿ ಗಲಾಟೆ ನೋಡಿರುತ್ತಾರೆಂದು ಹೇಳುತ್ತಾರೆ. ಆರೋಪಿತರು ಹಲ್ಲೆ ಮಾಡಿದಾಗ ನನಗೆ ಅಲ್ಪಸ್ವಲ್ಪ ಪ್ರಜ್ಞೆ ಹೋಗಿತ್ತು. ಬೈಕ್ ನಾನೇ ಎತ್ತಿದ್ದು ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾಸಾ 4 ಮತ್ತು 5 ಅವರು ನಮ್ಮನ್ನು ಅಂಬ್ಯೂಲೇಸ್ಸನಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ.

7.45 ಗಂಟೆಗೆ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು ಅಲ್ಲಿ ಆಗುವುದಿಲ್ಲವೆಂದಿದ್ದಕ್ಕೆ ನಿಮ್ಯಾನ್ಸ ಆಸ್ಪತ್ರೆಗೆ ಹೋಗಿರುತ್ತೆವೆಂದು ಹೇಳುತ್ತಾರೆ. ಆದ ದಿನ ನಾವು ಯಾರೂ ಠಾಣೆಗೆ ಹೋಗಿರುವುದಿಲ್ಲ. ಹು.ದುರ್ಗದಲ್ಲಿಯೂ ಸಹ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ ಸಾಕ್ಷಿ ನಾವು ಕುಣಿಗಲ್ ಆಸ್ಪತ್ರಗೆ ಬಂದಿರುತ್ತೇವೆ ಹು.ದುರ್ಗ ಆಸ್ಪತ್ರೆಗೆ ಹೋಗಿಲ್ಲವೆಂದು ಹೇಳುತ್ತಾರೆ. ಕುಣಿಗಲ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಶಿಪಾರಸ್ಸು ಮಾಡಿ ಬರೆದುಕೊಟ್ಟಿರುತ್ತಾರೆ ಅದನ್ನು ಪೋಲಿಸರಿಗೆ ನೀಡಿರುತ್ತೇನೆ.

ನಾನು ಹೇಳಿದ ರೀತಿಯಲ್ಲಿ ಗಲಾಟೆ ಆಗಿದ್ದಲ್ಲಿ ನನಗೆ ಗಾಯ ಆಗಿದ್ದಲ್ಲಿ ನಾನು ನಿಮ್ಯಾನ್ಸ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇ ಎಂದರೆ ಸರಿಯಲ್ಲ. ನಿಮ್ಯಾನ್ಸ ಆಸ್ಪತ್ರೆಯಲ್ಲಿ ಇಂಜೇಕ್ಷನ್ ನೀಡಿದಾಗ ಮಾರನೇ ದಿನ ಪ್ರಜ್ಞೆ ಬಂದಿರುತ್ತದೆ. ನಿಮ್ಯಾನ್ಸ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲು ಆಗಿರುವುದಿಲ್ಲ. ಗಲಾಟೆ ಆದ ಮಾರನೇ

ದಿನ ಪೋಲಿಸ ಠಾಣೆಗೆ ಹೋಗಿರುತ್ತೇನೆ. ನಂತರ ಸಾಕ್ಷಿ ನನ್ನ ಅಣ್ಣ ಪೋ. ಠಾಣೆಗೆ ಹೋಗಿದ್ದು ನಾನು ಆಸ್ಪತ್ರೆಯಲ್ಲಿದ್ದೇ ಪೋ.ಠಾಣೆಗೆ ಹೋಗಿರುವುದಿಲ್ಲ. ಯಾವುದೆ ಘಟನೆ ಆಗದೆ ಇದ್ದರೂಸಹ ಕ್ರಿಮಿನಲ್ ದಾಖಲಿಸಿದ್ದಲ್ಲಿ ಭಾಗಾಂಶ ದಾವೆಗೆ ಅನುಕೂಲವಾಗುತ್ತದೆಂದು ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಯಾವುದೇ ಘಟನೆ ನಡೆದಿರುವುದಿಲ್ಲ ಯಾವುದೇ ಹಲ್ಲೆ ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರಕ್ಕೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ನಾನು ಯಾವುದೇ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.